ಹೊರತು ಮತ್ತೆ ಯಾರಿಂದಲೂ ಆಲ್ಲ. ಮಾನ್ಯ ಸದಸ್ಯರು ಹೇಳಿದಂಥ ಆಪಾದನೆ ಇಲ್ಲ. ಹಾಗೆ ಏನಾದರೂ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಅದನ್ನು ಸರಿ ಮಾಡುತ್ತೇನೆ. ಮತ್ತೆ ವಿದ್ಯುತ್ ಬಿಲ್ ಬಾಕಿ ಇದ್ದಲ್ಲಿ ಅದನ್ನು ಕಟ್ಟಲೇ ಬೇಕಾಗುತ್ತದೆ. ಇದರ ಬಗ್ಗೆ ನಾನು ಆದಷ್ಟು ಗಮನ ಹರಿಸುತ್ತೇನೆ ಎಂಬ ಭರವಸೆಯನ್ನು ಮಾನ್ಯ ಸದಸ್ಯರಾದ ಜಮಖಂಡಿಯವರಿಗೆ ಕೊಡುತ್ತೇನೆ. ಇಷ್ಟೊಂದು ಲಕ್ಷಾಂತರ ರೂಪಾಯಿ ಹಣವನ್ನು ವಿಚ್ರ್ ಮಾಡಿ ಹದಿನೆಂಟು ಕುಟುಂಬಗಳು ಉದ್ಧಾರ ಆಗತಕ್ಕಂಥ ಕಾರ್ಯಕ್ರಮವು ಸ್ಥಗಿತಗೊಳ್ಳಬಾರದು. ಅದನ್ನು ಜಾರಿಗೆ ತರಂವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ ಜಿ. ಜಮಖಿಂಡಿ.—ಅಧ್ಯಕ್ಷರೇ.....

ಅಧ್ಯಕ್ಷರು.—ಇಷ್ಟು ಸಮಂಜಸವಾಗಿ ಹೇಳಿದ್ದಾರೆ, ಮತ್ತೆ ಪ್ರಶ್ನೆ ಕೇಳುತ್ತೀರಾ ?

ಶ್ರೀ ಬಿ. ಜಿ. ಜಮಖಿಂಡಿ.—ಒಂದೇ ಒಂದು, ಅದರ ಉದ್ದೇಶ ಏನೆಂದರೆ ಇದು ಕಾಯ್ದಿಟ್ಟ ಮತ ಕ್ಷೇತ್ರ. ಈಗ ಆಲ್ಲಿ ಏನಾಗಿದೆ ಎಂದರೆ ದುಡ್ಡು ಏನಾದರೂ ರಿಲೀಸ್ ಮಾಡಿದರಿ ಹಲವಾರು ಯೋಜನೆ ಮಾಡಿಕೊಂಡಂ ಹೋಗುತ್ತಾರೆ. ಈ ದುಡ್ಡು ಎಲ್ಲಿ ಹೋಗಿದೆ? ಅದನ್ನು ಕೇಳುವ ಉದ್ದೇಶ ಎಂದರೆ ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕು ಒಂದು. ಆಲ್ಲಿ ನೀರಾವರಿ ಮಾಡಬೇಕಾದರೆ ಕೆಲವೊಂದಂ ತಿಂಗಳು, ಒಂದು ವರ್ಷ ತೆಗದುಕೊಳ್ಳಬಹುದು. ಇದನ್ನು ಆಲ್ಲಿಯ ಜನಗಳಿಗೆ ಹೇಳಿದರೆ ಅನುಕೂಲವಾಗುತ್ತದೆ. ಇದನ್ನು ನಾನು ಎದುರಿಸಬೇಕಾದರೆ ಬಹಳ ಕಷ್ಟವಾಗುತ್ತದೆ. ಅವರು ಏನಂ ಕೇಳುತ್ತಾರೆಂದರೆ ಸರ್ಕಾರದಿಂದ ಇನ್ನು ದುಡ್ಡು ಬಂದಿಲ್ಲ, ನೀರಾವರಿ ಆಗುತ್ತಿಲ್ಲ, ಪೈಪ್‌ಲೈನ್ ಬಂದಿಲ್ಲ ಎಂದು. ಒಂದಂ ಮಾತ್ರ ಒಪ್ಪಿಕೊಳ್ಳುತ್ತೇನೆ. ಒಂದು ವಿದ್ಯುತ್ ಮೋಟಾರನ್ನು ಕೊಡಿಸಿದ್ದಾರೆ. ನಿಜ. ಆದರೆ ಇನ್ನು ದುಡ್ಡು ಕೊಟ್ಟಿಲ್ಲ. ಆ ಪಂಪ್ ಸೆಟ್ ಬಂದಿದ್ದುದು ಆ ಭಾವಿ ಆಳ ತೆಗೆಯುವಾಗ. ಅಷ್ಟು ಉಪಯೋಗ ಮಾಡಿದ್ದಾರೆ. ಮತ್ತೆ ಬೇರೆ ಉಪಯೋಗ ಮಾಡಿಲ್ಲ. ಆದ್ದರಿಂದ ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ಹೇಳುವುದು. ಇದನ್ನು ಮಾಡಿದರೆ ಜನರಲ್ಲಿ ವಿಶ್ವಾಸ ಬೆಳೆಯುತ್ತದೆ. ಸರ್ಕಾರ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂಬ ಭಾವನೆ ಆ ಜನರಲ್ಲಿ ಬರುತ್ತದೆ. ಆದ್ದರಿಂದ ಇದನ್ನು ತೀವ್ರ ಗತಿಯಿಂದ ಕೈಗೊಂಡು ಇದನ್ನು ಸಮಗ್ರ ತನಿಖೆ ಮಾಡಿ ನೊಂದ ಜನರಿಗೆ ಪರಿಹಾರ ಒದಗಿಸಿ ಕೊಡಬೇಕೆಂದು ನನ್ನ ಬೇಡಿಕೆ.

ಶ್ರೀ ಜಿ. ಬಸವಣ್ಣೆಪ್ಪ.—ಮಾನ್ಯ ಸದಸ್ಯರು ಅವ್ಯವಹಾರ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ತಕ್ಷಣ ರಿಪೋರ್ಟನ್ನು ತರಿಸುತ್ತೇನೆ. ಸೆಪ್ಟೆಂಬರ್ ಲಾಸ್ಟ್ ವೀಕ್‌ನಲ್ಲಿ ಬಿಜಾಪುರ ಜಿಲ್ಲೆಗೆ ನಾನು ಪ್ರವಾಸ ಹೋಗುತ್ತಿದ್ದೇನೆ. ಆ ಸಂದರ್ಭದಲ್ಲಿ ಪ್ರತ್ಯಕ್ಷ ವಿಸಿಟ್ ಮಾಡಿ ಆ ಸದಸ್ಯರನ್ನು ಮತ್ತು ಅಧಿಕಾರಿಗಳನ್ನು ವಿಸಿಟ್ ಮಾಡಿ ಅಧಿಕಾರಿಗಳು ಮತ್ತು ಸದಸ್ಯರನ್ನು ಒಂದು ಮಾಡಿ, ಯಾವ ರೀತಿ ಅದನ್ನು ಸರಿಪಡಿಸ ಬೇಕೋ ಸರಿಪಡಿಸುತ್ತೇನೆ. ಈ ಅವ್ಯವಹಾರದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ನಾಲ್ಕನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆಗಳು

ಅಧ್ಯಕ್ಷರು.—ಕುಶಾಲ್‌ರವರೇ ನಿಮ್ಮ ಪ್ರಶ್ನೆ ಕೇಳಿ ? ನಿಮ್ಮ ಪ್ರಶ್ನೆಗೆ ಟೈಮ್ ಕೇಳಿದ್ದಾರೆ, ನಂತರ ತೆಗೆದುಕೊಳ್ಳೋಣ.

ಐದನೆಯ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೋತ್ತರಗಳು

ವೈದ್ಯಾಪ್ಯ ವೇತನ, ವಿಧವಾ ವೇತನ ಮತ್ತು ಅಂಗವಿಕಲರ ವೇತನಗಳ ಬಗ್ಗೆ

೩೧೮. ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಪುರ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗುಲ್ಬರ್ಗ ಜಿಲ್ಲೆ ಶಹಾಪುರ ತಾಲ್ಲೂಕಿನಲ್ಲಿ ೧೯೮೫-೮೬, ೧೯೮೬-೮೭ರಲ್ಲಿ ವೈದ್ಯಾಪ್ಯ, ವಿಧವೆಯರ ಹಾಗೂ ಅಂಗವಿಕಲರ ಮಾಸಾಶನ ಕೋರಿ ಬಂದಿರುವ ಅರ್ಜಿಗಳೆಷ್ಟು ?

(ಆ) ಈ ರೀತಿ ಬಂದ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳನ್ನು ಇತ್ಯರ್ಥ ಮಾಡಲಾಗಿದೆ ?

(೩) ಬಾಕಿ ಉಳಿದಿರುವ ಅರ್ಜಿಗಳೆಷ್ಟು ?

(ಈ) ಈ ರೀತಿ ಬಾಕಿ ಉಳಿದಿರುವ ಅರ್ಜಿಗಳನ್ನು ತೀರ್ಪುದಲ್ಲಿ ಇತ್ಯರ್ಥ ಮಾಡಲು ಸರಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

		ವೃದ್ಧಾಪ್ಯ ಮಾಸಾಶನ	ವಿಧವಾ ಮಾಸಾಶನ	ಅಂಗವಿಕಲರ ಮಾಸಾಶನ
(ಅ)	೧೯೮೫–೧೯೮೬ ೧–೪–೧೯೮೬ ರಿಂದ ೩೧–೭–೧೯೮೬ ರವರೆಗೆ	೪೧೪	೧೧೭೧	೧೭೨
(ಆ)	೧೯೮೫–೧೯೮೬ ೧–೪–೧೯೮೬ ರಿಂದ ೩೧–೭–೧೯೮೬ ರವರೆಗೆ	೪೦೭	೧೧೬೬	೧೬೯

(೨) ಈ ಯೋಜನೆಗಳ ಅಡಿಯಲ್ಲಿ ೩೧–೭–೧೯೭೬ ರವರೆಗೆ ಬಾಕಿ ಉಳಿದಿರುವ ಅರ್ಜಿಗಳ ವಿವರ ಕೆಳಗಿನಂತೆ ಇದೆ.—

ವೃದ್ಧಾಪ್ಯ ವೇತನ	...	೩
ವಿಧವಾ ಮಾಸಾಶನ	...	೭
ಅಂಗವಿಕಲರ ಮಾಸಾಶನ	...	೨

(ಈ) ಕೈಗೊಳ್ಳಲಾಗಿದೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಅಧ್ಯಕ್ಷರೇ, ಯಾವ ಪ್ರಕಾರವಾಗಿ ನನ್ನ ಪ್ರಶ್ನೆಗೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೋ ತಿಳಿಯುವುದಿಲ್ಲ. ಸಂಪೂರ್ಣವಾಗಿ ಒಂದೊಂದು ಹೋಬಳಿಯಲ್ಲಿ ಬಹಳಷ್ಟು ಅರ್ಜಿಗಳು ವಿಲೇವಾರಿಯಾಗದೇ ಉಳಿದಿವೆ. ಆದ್ದರಿಂದ ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ಕೊಟ್ಟು ಸರಿಯಾಗಿ ವಿಲೇವಾರಿ ಆಗತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ.—ಈಗ ನಾನು ಹೇಳಿದಂಥ ಪಟ್ಟಿಯನ್ನು ನೋಡಿದರೆ ೧೯೮೫–೮೬ರಲ್ಲಿ ವೃದ್ಧಾಪ್ಯ ವೇತನಕ್ಕೆ ೪೧೪ ಜನಕ್ಕೆ ಕೊಟ್ಟಿದ್ದೇವೆ. ವಿಧವಾ ವೇತನಕ್ಕೆ ೧೧೭೧ ಜನರಿಗೆ ಕೊಟ್ಟಿದ್ದೇವೆ. ಅಂಗವಿಕಲರಿಗೆ ೧೭೨ ಜನಕ್ಕೆ ಕೊಟ್ಟಿದ್ದೇವೆ. ಇಷ್ಟು ಒಂದು ತಾಲ್ಲೂಕಿನಲ್ಲಿಯೇ ಕೊಟ್ಟಿದ್ದೇವೆ. ಈಗ ಅರ್ಜಿಗಳು ಬಾಕಿ ಇರುವುದು ವೃದ್ಧಾಪ್ಯ ವೇತನದವು ೩, ವಿಧವಾವೇತನ ೭, ಅಂಗವಿಕಲರ ಅರ್ಜಿ ೨. ಅಂಕಿಅಂಶವನ್ನು ಸಭೆಯ ಗಮನಕ್ಕೆ ತಂದಿದ್ದೇನೆ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ತಪ್ಪು ಉತ್ತರ ಕೊಟ್ಟಿದ್ದಾರೆ. ಸಮ್ಮಸಮ್ಮನೆ ರಿಜೆಕ್ಟ್ ಮಾಡಿದಂಥ ಅರ್ಜಿಗಳ ಬಗ್ಗೆ ಹೇಳಿಲ್ಲ. ವೃದ್ಧಾಪ್ಯ ವೇತನಕ್ಕೆ ಬಂದ ಅರ್ಜಿಗಳಲ್ಲಿ ಅವರಿಗೆ ಮಕ್ಕಳು ಇದ್ದಾರೆ ಎನ್ನತಕ್ಕಂಥದ್ದು ಹೇಳಿ ಅದನ್ನು ತಿರಸ್ಕಾರ ಮಾಡುತ್ತಾರೆ. ಆದ್ದರಿಂದ ದಯವಿಟ್ಟು ಇಂತಹ ಅರ್ಜಿಗಳನ್ನು ಪುರಸ್ಕರಣೆ ಮಾಡಿ ಸ್ಯಾಂಕ್ಷನ್ ಆಗತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾ.

ಶ್ರೀ ಜಿ. ಬಸವಣ್ಣೆಪ್ಪ.—ಅವುಗಳನ್ನು ಮಂಜೂರು ಮಾಡುವಾಗ ಕೆಲವು ಕ್ರೈಟೀರಿಯಾ ಇದೆ. ವೃದ್ಧಾಪ್ಯ ವೇತನಕ್ಕೆ ೬೫ ವರ್ಷ ಆಗಿರಬೇಕು, ಅವರು ನಿರ್ಗತಿಕರು ಆಗಿರಬೇಕು. ವಿಧವಾ ವೇತನಕ್ಕೆ ಅವರ ವರಮಾನ ೧೫೦೦ ರೂಪಾಯಿಗಳು ಇರಬೇಕು. ಇದು ನಿಬಂಧನೆಗಳು. ಆದ್ದರಿಂದ ಇವುಗಳ ಆಧಾರದ ಮೇಲೆ ರಿಜೆಕ್ಟ್ ಮಾಡುತ್ತಾರೆ. ಬಂದ ಎಲ್ಲಾ ಅರ್ಜಿಗಳನ್ನು ಮಂಜೂರು ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಒಂದೇ ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಬಿಡುವುದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು.—ಈ ರೀತಿ ಆದರೆ ಉಳಿದ ಪ್ರಶ್ನೆಗಳನ್ನು ನಾನು ಲ್ಯಾಪ್ಸ್ ಮಾಡಬೇಕಾಗುತ್ತದೆ. ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ. ಈಗಾಗಲೇ ಪ್ರಶ್ನೋತ್ತರ ವೇಳೆ ಮುಗಿದಿದೆ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಪ್ರಶ್ನೆಗಳು ಇನ್ನು ಬಹಳ ಉಳಿದಿವೆ. ಅವೆಲ್ಲವನ್ನೂ ಲ್ಯಾಪ್ಸ್ ಮಾಡಬೇಕಾಗುತ್ತದೆ. ಈಗಾಗಲೇ ೧೨-೩೦ ಗಂಟೆ ಆಗುತ್ತಾ ಬಂತು.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೆ ಬಂಗಾರಪೇಟೆ ಕಿರಿಯ ಕಾಲೇಜಿನಲ್ಲಿ ವಿದ್ಯಾರ್ಥಿಗಳು ತಮಗಾದ ಅನ್ಯಾಯದ ಬಗ್ಗೆ ನಿಯೋಗದಲ್ಲಿ ಬಂದು ನನಗೆ ಅರ್ಜಿ ಕೊಟ್ಟರು. ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನಾನೇ ಖುದ್ದಾಗಿ ಕೊಟ್ಟಾಗ ಪರಿಶೀಲನೆ ಮಾಡುತ್ತೇನೆಂದು ಅವರು ಹೇಳಿದರು. ಇನ್ನೊಂದು ಏನಾಗುತ್ತಿದೆಯೆಂದರೆ ನೀವು ಕೊಟ್ಟಂಥ ಸ್ಕಾಲರ್‌ಷಿಪ್ ಏನಿದೆ ಅದನ್ನು ನೇರವಾಗಿ ಪೋಷಕರಿಗೆ ಕಳುಹಿಸಿದರೆ ಅದರಲ್ಲಿ ಮೋಸ ಆಗುವುದಿಲ್ಲ. ವಿದ್ಯಾರ್ಥಿಗಳಿಂದ ಸೈನ್ ಮಾಡಿಸಿಕೊಂಡು ಬಿಟ್ಟಿರುತ್ತಾರೆ. ನಂತರ ದುಡ್ಡು ಕೊಡುತ್ತೇವೆ ಎಂದು ಹೇಳುತ್ತಾರೆ. ಇದರಿಂದ ಅಲ್ಲಿ ದುರ್ವ್ಯವಹಾರ ನಡೆದಿದೆ. ಹುಡುಗರ ಹತ್ತಿರ ಸೈನ್ ಮಾಡಿಸಿಕೊಂಡಿರುವುದರಿಂದ ಹಣ ಬಂದಾಗ ಪೋಷಕರಿಗೂ ಗೊತ್ತಾಗುವುದಿಲ್ಲ. ವಿದ್ಯಾರ್ಥಿಗಳಿಗೂ ಗೊತ್ತಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ತನಿಖೆ ನಡೆಸಬೇಕು. ವಿದ್ಯಾರ್ಥಿಗಳು ಸತತವಾಗಿ ಎರಡು ವರ್ಷದಿಂದ ತೊಂದರೆ ಪಡುತ್ತಿದ್ದಾರೆ. ಪೋಷಕರಿಗೇ ವಿದ್ಯಾರ್ಥಿವೇತನದ ಹಣವನ್ನು ನೇರವಾಗಿ ಕಳುಹಿಸಬೇಕು.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೆ, ಬಂಗಾರಪೇಟೆ ಕಿರಿಯ ಕಾಲೇಜಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ೧೯೮೪-೮೫ರಲ್ಲಿ ೨೪,೯೯೪ ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು, ಅದರಲ್ಲಿ ೨೪,೪೨೯ ರೂಪಾಯಿಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗಿದೆ. ಉಳಿದ ಹಣ ೪೫೫ ರೂಪಾಯಿಗಳನ್ನು ಸರ್ಕಾರಕ್ಕೆ ಮರುಪಾವತಿ ಮಾಡಲಾಗಿದೆ. ೧೯೮೫-೮೬ರಲ್ಲಿ ವಿದ್ಯಾರ್ಥಿವೇತನ ೨೫,೨೭೦ ರೂಪಾಯಿಗಳು ಮಂಜೂರಾಗಿದೆ. ಅದರಲ್ಲಿ ೨೪,೪೬೪ ರೂಪಾಯಿಗಳನ್ನು ವಿತರಣೆ ಮಾಡಲಾಗಿದೆ. ಉಳಿದ ೮೦೬ ರೂಪಾಯಿಗಳನ್ನು ಸರ್ಕಾರಕ್ಕೆ ಮರುಪಾವತಿ ಮಾಡಲಾಗಿದೆ. ಮಾನ್ಯ ಸದಸ್ಯರು ಇಲ್ಲಿ ದುರುಪಯೋಗ, ಅವ್ಯವಹಾರವಾಗಿದೆ ಎಂದು ಹೇಳುತ್ತಿದ್ದಾರೆ. ಅದನ್ನು ಡೀಟೈಲಾಗಿ ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಸರ್ಕಾರದಿಂದ ಸವಲತ್ತು ಸಿಗುತ್ತದೆ. ಆದರ ಬಗ್ಗೆ ಪೋಷಕರಿಗೆ ಮಾಹಿತಿ ಕೊಟ್ಟರೆ ಮೋಸವಾಗುವುದಿಲ್ಲ, ತೊಂದರೆಯಾಗುವುದಿಲ್ಲ. ಪೋಷಕರಿಗೇ ನೇರವಾಗಿ ಸವಲತ್ತನ್ನು ಕಳುಹಿಸಿಕೊಟ್ಟರೆ ಸರ್ಕಾರ ಎಷ್ಟು ಸಹಾಯ ಮಾಡುತ್ತದೆಂಬುದು ಅವರಿಗೆ ಗೊತ್ತಾಗುತ್ತದೆ. ಈ ವ್ಯವಸ್ಥೆ ಮಾಡಿದರೆ ಇಡೀ ರಾಜ್ಯದಲ್ಲಿ ಪ್ರಿನ್ಸಿಪಾಲರಾಗಲೀ, ಅಧಿಕಾರಿಯಾಗಲೀ ಮೋಸ ಮಾಡುವುದಕ್ಕೆ ಆಗುವುದಿಲ್ಲ. ಈ ವ್ಯವಸ್ಥೆಯನ್ನು ಈ ವರ್ಷದಿಂದ ಜಾರಿ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ —ಪೋಸ್ಟ್ ಗ್ರಾಜುಯೇಟ್ ವಿದ್ಯಾರ್ಥಿಗಳಿಗೆ ಗವರ್ನಮೆಂಟ್ ಆಫ್ ಇಂಡಿಯಾ ಸ್ಕಾಲರ್‌ಷಿಪ್ ೧೫೦ ರೂಪಾಯಿಗಳನ್ನು ಕೊಡುತ್ತಾರೆ. ಬೀದರ್ ಜಿಲ್ಲೆಯಲ್ಲಿ ಈ ಬಗ್ಗೆ ಬಹಳ ಅನ್ಯಾಯ ನಡೆಯುತ್ತಿತ್ತು ಎಂದು ನಾನು ಬಂದು ಆಜ್ಞೆ ಹೊರಡಿಸಿದ್ದೇನೆ. The Principal of the College should prepare a list of eligible SC/ST candidates with their addresses. ನೇರವಾಗಿ ಕ್ಯಾಸ್ಟ್ ಚೆಕ್ಕನ್ನು ಅವರಿಗೇ ಕಳುಹಿಸಬೇಕೆಂದು ಅಡ್‌ಹಾಕ್ ಬೇಸಿಸ್ ಮೇಲೆ ಬೀದರ್ ಜಿಲ್ಲೆಗೆ ಮಾತ್ರ ಆಜ್ಞೆ ಹೊರಡಿಸಿದ್ದೇನೆ. ಎಲ್ಲಾ ಕಡೆ ಇಂಥದ್ದು ಇದ್ದರೆ ಇದನ್ನೇ ಅನುಸರಿಸಬೇಕಾಗುತ್ತದೆ. ಆದ್ದರಿಂದ ತಾವು ಏನು ಹೇಳಿದ್ದೀರಿ ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಐದನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಮಂದನ ಗೋಪಾಲ ನಾಯಕ್ ಅವರು ಕೇಳಬೇಕು.

ಶ್ರೀ ವೀರಣ್ಣ (ಸಾರಿಗೆ ರಾಜ್ಯ ಸಚಿವರು).— ಇದಕ್ಕೆ ಉತ್ತರ ಬಂದಿಲ್ಲ, ಟೈಮ್ ಬೇಕು ಸ್ವಾಮಿ.

ಅಧ್ಯಕ್ಷರು.—ಇದಕ್ಕೆ ಒಂದು ವಾರ ಟೈಮ್ ಬೇಕಂತೆ, ಶ್ರೀ ಮಲ್ಲಿಕಾರ್ಜುನ ಖಾರ್ಗೆಯವರೆ, ತಮ್ಮ ಪ್ರಶ್ನೆ ಕೇಳಿ.

ಶ್ರೀ ವೀರಣ್ಣ.—ಇದಕ್ಕೂ ಉತ್ತರ ಬಂದಿಲ್ಲ ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ಇದಕ್ಕೇನಾದರೂ ಪರಿಹಾರ ಬೇಕು.

ಅಧ್ಯಕ್ಷರು.—ಉತ್ತರ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಕಳುಹಿಸಿಕೊಡುತ್ತೇನೆ ಎಂದು ಹೇಳಿದ್ದಾರೆ. We will try our level best to see that you will get the reply.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರಿ ಯಂತ್ರ ಏನು ಮಾಡುತ್ತಿದೆ.

ಅಧ್ಯಕ್ಷರು.—ನೀವು ಮಂತ್ರಿಯಾಗಿ ಕೆಲಸ ಮಾಡಿದ್ದರೆ ಅದರ ಡಿಫಿಕಲ್ಟ್ ಗೊತ್ತಾಗುತ್ತಿತ್ತು.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರಿ ಯಂತ್ರ ನಿಧಾನವಾಗುತ್ತಿದೆ.

ಅಧ್ಯಕ್ಷರು.—ಕುಳಿತುಕೊಳ್ಳಿ ಸ್ವಾಮಿ, ಉತ್ತರ ತರಿಸಿಕೊಡುತ್ತೇನೆ ಅವರಿಗೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೂ ಇಲ್ಲ, ಇವರಿಗೂ ಇಲ್ಲ ಯಾರಿಗೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದರೂ ಅವರು ಗಮನದಲ್ಲಿಟ್ಟು ಕೊಂಡು ಮಾಡುತ್ತಿಲ್ಲ. ಇದು ಮೂರನೇ ಸಲ.....

ಅಧ್ಯಕ್ಷರು.—ತಾವು ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಡಿಫಿಕಲ್ಟ್ ಗೊತ್ತಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಮಂತ್ರಿಯಾಗಿದ್ದಾಗ ಕೇಳಿದ್ದರೆ ನಾನು ಉತ್ತರ ಹೇಳುತ್ತಿದ್ದೆ. ಇದು ಆಗಬಾರದು. ಅಜೆಂಡಾದಲ್ಲಿ ಹಾಕಿದೆ.

ಅಧ್ಯಕ್ಷರು.—ಒಮ್ಮೊಮ್ಮೆ ಉತ್ತರ ಬರುತ್ತದೆ. ಒಂದು ದಿವಸ ೧೦ ಗಂಟೆಗೆ ಬರುತ್ತದೆ. ಒಂದು ದಿವಸ ೧೧ ಗಂಟೆಗೆ ಬರುತ್ತದೆ. ಆದಕ್ಕೋಸ್ಕರ ಅಜೆಂಡಾದಲ್ಲಿ ಹಾಕಿದೆ. ಅಜೆಂಡಾದಲ್ಲಿ ಹಾಕದೇ ಬಿಟ್ಟರೆ, ಆಕಸ್ಮಾತ್ ಬೆಳಗ್ಗೆ ಉತ್ತರ ಬಂತು ಎಂದು ತಿಳಿದುಕೊಳ್ಳಿ. ಆಗ ನಿಮಗೆ ತೊಂದರೆಯಾಗುತ್ತದೆ. ಆದ್ದರಿಂದ ಅಜೆಂಡಾದಲ್ಲಿ ಹಾಕುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ತಮ್ಮ ವಿಷಯದಲ್ಲಿ ಭಿನ್ನಾಭಿಪ್ರಾಯ ಇಲ್ಲ. ತಾವು ಬಹಳ ಪ್ರಯತ್ನಪಡುತ್ತಿದ್ದೀರಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಅಂದರೆ ಕೂರಬೇಕು. ಪ್ರಶ್ನೋತ್ತರ ಮುಗಿದರೂ ಇನ್ನೂ ೭ ಪ್ರಶ್ನೆಗಳು ಇದೆ, ಆ ಮೇಲೆ ಷಿಷಿಳ ಕೊಟ್ಟಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ದಯವಿಟ್ಟು ಅವರಿಗೆ ಹೇಳಿ. ಒಂದೂ ಪ್ರಶ್ನೆಗೆ ಉತ್ತರ ಇಲ್ಲ, ಒಂದು ಪ್ರಶ್ನೆಗೆ ಮಂತ್ರಿಗಳಿಲ್ಲ ಎಂದರೆ ನಾವು ಏತಕ್ಕೆ ಇಲ್ಲಿ ಬರಬೇಕು ಹೇಳಿ ?

ಅಧ್ಯಕ್ಷರು.—ಉತ್ತರ ತರಿಸಿಕೊಡುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಮದನಗೋಪಾಲ ನಾಯಕ್.—ಮನೆಗೆ ಕಳುಹಿಸಿಕೊಡುತ್ತೀರಾ ?

ಅಧ್ಯಕ್ಷರು.—ಕಳುಹಿಸಿಕೊಡುತ್ತೇನೆ.

ಶ್ರೀ ಮದನಗೋಪಾಲ ನಾಯಕ್.—ಬರೀ ಅದನ್ನೇ ಮಾಡುತ್ತೇನೆ.

ಅಧ್ಯಕ್ಷರು.—ಕುಳಿತುಕೊಳ್ಳಿ ತಮಗೆ ಉತ್ತರ ಕಳುಹಿಸಿಕೊಡುತ್ತೇನೆ.

ಶ್ರೀ ಮದನಗೋಪಾಲ ನಾಯಕ್.—ಸೆಷನ್ ಮುಂದೆ ಹೋಗುತ್ತದೆ. ಯಾವಾಗ ಕಳುಹಿಸಿ ಕೊಡುತ್ತೀರಿ ?

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಖಾರ್ಗೆಯವರಿಗೆ ಈಗ ಉತ್ತರ ಕೊಡುತ್ತಾರೆ.

ಶ್ರೀ ವೀರಣ್ಣ.—ಕಂದಾಯ ಇಲಾಖೆಯಿಂದ ಮದನಗೋಪಾಲ ನಾಯಕ್, ಮಲ್ಲಿಕಾರ್ಜುನ ಖಾರ್ಗೆ ಮತ್ತು ಲೀಲಾದೇವಿ ಪ್ರಸಾದ್ ಅವರ ಮುಂದೂಡಲಾದ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಎಂ. ಎಸ್. ಕೃಷ್ಣನ್ ಅವರ ಪ್ರಶ್ನೆಗೆ ಉತ್ತರ ಬಂದಿದೆ. ಅದನ್ನು ಹೇಳುತ್ತೇನೆ, ವಿುಕ್ಕ ಮೂರಕ್ಕೂ ಟೈಮ್ ಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನನಗೆ ಉತ್ತರ ಕೊಟ್ಟಿದ್ದೀರಲ್ಲ. ಇದೇನು ಕನ್‌ಫ್ಯೂಷನ್ ? ನನಗರ್ಥವಾಗುವುದಿಲ್ಲ. ನನಗೆ ಉತ್ತರ ಬಂದಿದೆ. ಪಾಪ ಅವರು ನೋಡಿಲ್ಲ ಎಂದು ಅರ್ಥವಾಯಿತು. ನಾನು ಹಾಕಿದ ಪ್ರಶ್ನೆ ಮುಖ್ಯಮಂತ್ರಿಗಳಿಗೆ. ತಾವು ಇದನ್ನು ರೂರಲ್ ಡೆವಲಪ್‌ಮೆಂಟ್ ವಿುನಿಸ್ಟರ್‌ಗೆ ಹಾಕಿದ್ದೀರಿ. ಇವತ್ತು ರೆವಿನ್ಯೂ ವಿುನಿಸ್ಟರ್‌ಗೆ ಹಾಕಿದ್ದೀರಿ. ಅವರ ಪರವಾಗಿ ಉತ್ತರ ಕೊಡುವವರಂ ಪಾಪ ನೋಡಿಲ್ಲ.

ಅಧ್ಯಕ್ಷರು.—ರೆವಿನ್ಯೂ ವಿುನಿಸ್ಟರ್ ಬಂದಿಲ್ಲ. ಅವರ ಪರವಾಗಿ ಕಳುಹಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಪ್ರಶ್ನೆ ಬಹಳ ಮುಖ್ಯ. ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗಕ್ಕೆ ಬಂದಾಗ ಚರ್ಚೆ ಮಾಡಿದರು. ಆದಕ್ಕೆ ಮುಖ್ಯಮಂತ್ರಿಗಳೇ ನೇರವಾಗಿ ಉತ್ತರ ಕೊಡಬೇಕೆಂದು ನಾನು ಪ್ರಶ್ನೆ ಹಾಕಿದೆ.

ಅಧ್ಯಕ್ಷರು.—ಈಗ ಉತ್ತರ ಸಿಕ್ಕಿದೆಯೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಏನು ಹೇಳಬೇಕಂ ಎಂಬುದಕ್ಕೆ ಅವರು ಉತ್ತರವನು ನೋಡಿಯೇ ಇಲ್ಲ.

ಅಧ್ಯಕ್ಷರು.—ಈಗ ರಿಟನ್ ಆನ್ಸರ್ ಬಂದಿದೆಯೋ ಇಲ್ಲವೋ ಅದನ್ನು ನೋಡಿಕೊಂಡು ಅವಕಾಶ ಸಿಕ್ಕಿದಾಗ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಮಗೆ ಗೊತ್ತಿದೆ ಇವೊತ್ತು ಕೊನೆಯ ದಿವಸ ಎಂದು. ಆದರೂ ಕೂಡ ಮುಖ್ಯಮಂತ್ರಿಗಳು, ರೆವಿನ್ಯೂ ವಿುನಿಸ್ಟರ್, ಇರಿಗೇಷನ್ ವಿುನಿಸ್ಟರ್ ಎಲ್ಲಾ ಪೂಜೆ ಮಾಡುವುದಕ್ಕೆ, ಸ್ವಾವಿುಗಳ ಹತ್ತಿರ ಹೋದರೆ ?

ಅಧ್ಯಕ್ಷರು.—ನೀವೂ ಮಂತ್ರಿಯಾಗಿದ್ದಾಗ ಪೂಜೆ ಮಾಡುತ್ತಿದ್ದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬಾಕಿ ಟೈಮ್‌ನಲ್ಲಿ ಹೋಗಲಿ.

ಅಧ್ಯಕ್ಷರು.—ಚೀಫ್ ವಿುನಿಸ್ಟರ್ ಅವರು ಅಫಿಷಿಯಲ್ ವಿುಟಿಂಗಿ ದಿಲ್ಲಿಗೆ ಹೋಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸೆಷನ್ ಇರುವಾಗ ಅಫಿಷಿಯಲ್ ವಿುಟಿಂಗಿಗೆ ಹೋಗಿದ್ದಾರೆಂದರೆ ನಾವು ಇಲ್ಲಿಗೆ ಸುಮ್ಮನೆ ಬಂದಿರುವುದೇ ?

ಅಧ್ಯಕ್ಷರು.—ಆಯಿತು. ನಿವುಗೆ ಉತ್ತರ ಹೇಳುತ್ತಾರೆ, ತೆಗೆದುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪಾಪ, ಎಂಬ್ಯಾಸ್ ಮಾಡಬಾರದು ಎಂಬ ದೃಷ್ಟಿಯಿಂದ ಅವರು ಏನು ಹೇಳಿದರೂ ಎಸ್ ಎಂದು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು.—ನಿವುಗೆ ಉತ್ತರ ಕೊಟ್ಟರೆ ಆಯಿತಲ್ಲವೇ ? ದಯವಿಟ್ಟು ಈಗ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಮಗೆ ಗೊತ್ತಿದ್ದ ಹಾಗೆ ಉತ್ತರವೇ ಬಂದಿಲ್ಲ ಎಂದು ಹೇಳಿದರು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ರಾಜವರ್ಧನ್ ಸಾಹೇಬರೇ ಈಗ ಮಾತನಾಡಿ. ನಿನ್ನೆ ಎಲ್ಲಾ ಮಾತನಾಡಿದಿರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪಾಪ, ಅವರಿಗೇನು ಗೊತ್ತು ?

ಶ್ರೀ ಕೆ. ಮಲ್ಲಪ್ಪ —ಮಾನ್ಯ ಸದಸ್ಯರು ಜವಾಬ್ದಾರಿ ಅರಿತಿದ್ದಾರೆ. ಪಾಪ ಎಂದು ಅವರಿಗೆ ಹೇಳುವುದು ದುಬಾರಿಯಾಗುತ್ತದೆ. ಅವರೂ ತಮ್ಮ ಜವಾಬ್ದಾರಿಯನ್ನು ಅರಿತಿದ್ದಾರೆ. ಪೂಜೆ ಸಲ್ಲಿಸತಕ್ಕದ್ದು ನಮ್ಮ ಕರ್ತವ್ಯ, ಧರ್ಮ. ಮಾನ್ಯ ಖಾರ್ಗೆಯವರು ಆ ರೀತಿ ಹೇಳುವುದರಲ್ಲಿ ಅರ್ಥವಿಲ್ಲ.

ಅಧ್ಯಕ್ಷರು.—ಮಾನ್ಯ ಖಾರ್ಗೆಯವರೇ, ನೀವು ಬರೀ ಭಾಷಣ ಮಾಡಬೇಕೇ ? ಅಥವಾ ತಪುಗೆ ಉತ್ತರ ಬೇಕೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.—ಈ ಪ್ರಶ್ನೆಯಲ್ಲಿ ಕನ್‌ಫ್ಯೂಷನ್ ಇದೆ. ನಾನು ಇದನ್ನು ಕಳುಹಿಸಿದ್ದುದು ಮಂಖ್ಯ ಮಂತ್ರಿಗಳು ಉತ್ತರಿಸಲಿ ಎಂದಂ.

ಅಧ್ಯಕ್ಷರು.—ಈಗ ಏನು ಮಾಡಬೇಕು ? ಉತ್ತರ ಬೇಕೋ ಮತ್ತೊಂದು ಸಾರಿ ಇದೇ ಪ್ರಶ್ನೆಯನ್ನು ಹಾಕಬೇಕೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಧ್ಯಾಹ್ನ ಮಾನ್ಯ ಮುಖ್ಯ ಮಂತ್ರಿಗಳು ಬಂದ ಮೇಲೆ ಉತ್ತರ ಕೊಡಲಿ.

ಅಧ್ಯಕ್ಷರು. —ಅವರು ಬರಬೇಕಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಬರಬೇಕಲ್ಲ ಎಂದರೆ, ಅವರನ್ನು ಕರೆಯಿಸಿ.

ಅಧ್ಯಕ್ಷರು.—ತಾವು ಈ ತರಹ ಮಾತನಾಡುವುದು ಸರಿಯಲ್ಲ. ನಾನು ಕರೆಯಿಸಬೇಕೆಂದೇನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಕೇವಲ ಅವರ ಪಕ್ಷಕ್ಕೆ ಮಾತ್ರ ಜವಾಬ್ದಾರರಲ್ಲ. ಈ ಸಭೆಗೂ ಜವಾಬ್ದಾರರು, ಇಲ್ಲಿ ಬಂದು ಉತ್ತರ ಕೊಡಲಿ ಬೇಕಾದರೆ ೩ ಗಂಟೆಗೆ ಉತ್ತರ ಕೊಡಿಸಿ.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಬಂದ ಮೇಲೆ ಕೊಡಿಸೋಣ ಈಗ ಕುಳಿತು ಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಪ್ರಶ್ನೆ ಹಾಕಿದ್ದುದಂ.

ಅಧ್ಯಕ್ಷರು.—ರೆವಿನ್ಯೂ ಮಿನಿಸ್ಟರ್‌ಗೆ ಹೋಗಿದೆ ಅದಂ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ. —ರೆವಿನ್ಯೂ ಮಿನಿಸ್ಟರ್‌ಗೆ ಹೋಗಿದ್ದೇ ತಪ್ಪು. The creation of the Board does not come to the Revenue Minister.

SRI B. SHANAPPA.—The Hon'ble Chief Minister visited Gulbarga and has given some assurance to the legislators when he had conducted the meeting there.

(ಗೊಂದಲ)

ಅಧ್ಯಕ್ಷರು.— ನಡುವೆ ನಡುವೆ ತಾವು ಏಕೆ ಮಾತನಾಡುವುದು ?

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.—ಅವರು ಸರಿಯಾದ ಉತ್ತರ ಕೊಡಲಿ.

ಶ್ರೀ ಪಟಮಕ್ಕಿ ರತ್ನಾಕರ.—ನಮ್ಮ ರಕ್ಷಣೆ ಮಾಡುವ ಜವಾಬ್ದಾರಿ ನಿಮ್ಮದು.

ಅಧ್ಯಕ್ಷರು. —ಶ್ರೀ ಬೊಮ್ಮಾಯಿಯವರು ಬಂದಾಗ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೋಡೋಣ ಎಂದರೆ ಯಾವಾಗ ? ಇವೊತ್ತೇ ? ಕೊನೆ ದಿವಸ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದು ಎರಡನೇ ಸಲ ಇದು ಪೋಸ್ಟ್‌ಪೋನ್ ಆಗಿದ್ದು, ಆದ್ದರಿಂದ ಮೂರು ಗಂಟೆಗೆ ದಯವಿಟ್ಟು ಇದನ್ನು ತೆಗೆದುಕೊಳ್ಳಿ.

ಬಗರ್ ಹುಕ್ಕುಂ ಸಾಗುವಳಿ ಕುರಿತು.

೨೩೬. (೫) **ಶ್ರೀ ಎಂ. ಎಸ್. ಕೃಷ್ಣನ್** (ಮಾನ್ಯ ಕಂದಾಯ ಯೋಜನಾ ಮಂತ್ರಿಗಳು).—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬಗರ್ ಹುಕ್ಕುಂ ಸಾಗುವಳಿ ಭೂಮಿಯ ಹಕ್ಕು ಪತ್ರ ಕೇಳಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಲೆಕ್ಕ ಕೊಡುವುದು)

ಆ) ಕಳೆದ ಮೂರು ವರ್ಷಗಳಲ್ಲಿ ವಿಲೇವಾರಿ ಆಗಿರುವ ಅರ್ಜಿಗಳು ಹಾಗೂ ಅವುಗಳಿಗೆ ಸಂಬಂಧ ಪಟ್ಟ ಭೂಮಿಗಳ ವಿಸ್ತೀರ್ಣ ಎಷ್ಟು ? (ವರ್ಷ ವರ್ಷದ ಹಾಗೂ ಹಕ್ಕುಪತ್ರ ನೀಡಿರುವ ಹಾಗೂ ನಿರಾಕರಿಸಿರುವ ವಿವರ ಬೇರೆ ಬೇರೆಯಾಗಿ ಕೊಡುವುದು)

ಇ) ಅನೇಕ ಮಂದಿ ಬಗರ್ ಹುಕುಂ ಸಾಗುವಳಿದಾರರಿರುವುದರಿಂದ ಅವರಿಗೆ ಸರ್ಕಾರಕ್ಕೆ ಎಷ್ಟು ಪತ್ರ ಕೋರಿ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಕೊಡಲಾಗುವುದು ?

ಈ) ಬಗರ್ ಹುಕುಂ ವಸತಿ ಹಾಗೂ ಸಾಗುವಳಿಯಾಗುತ್ತಿರುವ ಪ್ರಕರಣಗಳನ್ನು ಗುರುತಿಸಿ ಅವುಗಳನ್ನು ಬೇಗನೇ ಆಯಾ ಜನರಿಗೆ ಕೊಡುವ ಬಗ್ಗೆ ಸರ್ಕಾರದವರು ಏನು ಕ್ರಮ ಕೈಗೊಳ್ಳಲಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ ಭೂಮಿಯ ಹಕ್ಕುಪತ್ರ ಕೇಳಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಸುಮಾರು ೧,೩೮,೪೧೨ (ಜಿಲ್ಲಾವಾರು ವಿವರ ಕೆಳಗಿನಂತಿದೆ)

ಬೆಂಗಳೂರು	...	...	...	೩೬,೭೩೦
ತುಮಕೂರು	...	...	...	೨೨,೬೬೮
ಕೋಲಾರ	...	...	...	೪,೨೩೫
ಶಿವಮೊಗ್ಗ	...	...	...	೧೫,೨೬೨
ಚಿತ್ರದುರ್ಗ	...	...	...	೫.೦೪೪
ಮೈಸೂರು	...	...	...	೧೦,೦೧೯
ಹಾಸನ	...	...	...	೧೬,೯೪೫
ಮಂಡ್ಯ	...	...	...	೯,೮೬೬
ಚಿಕ್ಕಮಗಳೂರು	...	...	...	೧೫,೫೧೪
ದಕ್ಷಿಣ ಕನ್ನಡ	...	...	...	೨೧,೬೬೮
ಕೊಡಗು	...	...	...	೭,೨೯೨
ಬೆಳಗಾವ	...	...	...	೭೫೭
ಧಾರವಾಡ	...	...	...	೧,೦೯೨
ಬಿಜಾಪುರ	...	...	...	ಇಲ್ಲ,
ಉತ್ತರ ಕನ್ನಡ	...	...	...	೨೫೦
ಗುಲ್ಬರ್ಗಾ	...	...	...	೬,೨೮೬
ಬಳ್ಳಾರಿ	...	...	...	೬,೪೧೪
ರಾಯಚೂರು	...	...	...	೫.೬೯೬
ಬಿದರ	...	...	...	೨,೫೬೪